
# ಕಥೋಪದೇಶ

## ಭಾವೋದ್ವೇಗಗಳ ಗೂಂಡಾಗಿರಿ

ಒಬ್ಬ ವ್ಯಕ್ತಿಯಿದ್ದ. ಅವನ ಹೆಸರು ಪುಂಡ ಎಂದು. ಅವನು ಊರಿನವರೆಲ್ಲರಿಗೂ ತೊಂದರೆ ಕೊಡುತ್ತಿದ್ದ. ಅನೇಕರಿಗೆ ಮೋಸ ಮಾಡಿ ಹಣವಂತನಾಗಿದ್ದ. ಅವನ ಹತ್ತಿರ ಮೂವರು ಗೂಂಡಾಗಳು ಇದ್ದರು— ಸ್ವರಕ್ಷಣೆಗಾಗಿ ಮತ್ತು ಇತರರನ್ನು ಹಿಂಸಿಸುವುದಕ್ಕಾಗಿ. ಪುಂಡನು ಅದೇ ಊರಿನ ಇನ್ನೋರ್ವ ವ್ಯಕ್ತಿಗೆ ಸಾಲ ಕೊಟ್ಟಿದ್ದ. ಅನೇಕ ವರ್ಷಗಳಾದರೂ ಅವನು ಸಾಲವನ್ನು ತೀರಿಸಿರಲಿಲ್ಲ. ಬಡ್ಡಿ ಚಕ್ರಬಡ್ಡಿ ಸಮೇತ ಅದು ಬೆಳೆದು ತೀರಿಸಲಾಗದ ಸ್ಥಿತಿಯನ್ನು ಮುಟ್ಟಿತ್ತು.

ಒಂದು ದಿನ ಪುಂಡನು ತನ್ನ ಮೂವರು ಗೂಂಡಾಗಳ ಜೊತೆ ಆ ವ್ಯಕ್ತಿಯ ಮನೆಗೆ ಹೋದನು. ಎಷ್ಟೇ ಬೆದರಿಸಿದರೂ ಆ ವ್ಯಕ್ತಿ ಹಣವನ್ನು ಹಿಂತಿರುಗಿಸುವುದರ ಸ್ಥಿತಿಯಲ್ಲಿರಲಿಲ್ಲ. ಅವನಲ್ಲಿದ್ದರೆ ತಾನೆ ಕೊಡುವುದು. ಈಗ ಪುಂಡನು ತನ್ನ ಗೂಂಡಾಗಳಿಗೆ ಆಜ್ಞಾಪಿಸಿದ. ಅವರು ಮನೆಯ ಒಳಗೆ ನುಗ್ಗಿ, ಎದುರಾದವರನ್ನೆಲ್ಲ ಥಳಿಸಿ, ಕೈಗೆ ಸಿಕ್ಕಿದ್ದನ್ನೆಲ್ಲ ದೋಚಿದರು. ಒಡವೆ ವಸ್ತ್ರ ಪಾತ್ರೆಗಳೆಲ್ಲವನ್ನೂ ಚೀಲಗಳಲ್ಲಿ ತುಂಬಿಸಿದರು. ಯಾವುದೇ ಬೆಲೆ ಬಾಳುವ ವಸ್ತುವನ್ನೂ ಅಲ್ಲಿ ಬಿಡಲಿಲ್ಲ. ಎಲ್ಲವನ್ನೂ ಕಳೆದುಕೊಂಡು, ಸರಿಯಾಗಿ ಪೆಟ್ಟನ್ನೂ ತಿಂದು ಮನೆಯವರೆಲ್ಲ ಗೊಳೊ ಎಂದು ಅಳುತ್ತಿದ್ದರು. ಅವರ ರೋದನವನ್ನು ಕೇಳಿ ಸಂತೋಷದಿಂದ ಮೀಸೆ ತಿರುಗಿಸುತ್ತಾ ಪುಂಡನು ಆ ಮನೆಯಿಂದ ಹೊರಟನು. ಅವನ ಹಿಂದೆ ಗೂಂಡಾಗಳು ಚೀಲವನ್ನು ಹೊತ್ತುಕೊಂಡು ನಡೆದರು.




ನಡೆದು ಸುಸ್ತಾದ ಪುಂಡನು ವಿಶ್ರಮಿಸಿದನು. ಅವನನ್ನು ನಿದ್ರೆ ಆವರಿಸಿತು. ಸಾಮಾನನ್ನು ಇರಿಸಿಕೊಂಡು ಅಲ್ಲಿಯೇ ಕುಳಿತಿದ್ದ ಗೂಂಡಾಗಳಿಗೆ ಒಂದು ಒಳ್ಳೆಯ ಆಲೋಚನೆ ಬಂತು. ಆ ಆಲೋಚನೆಯ ಪ್ರಕಾರ ಅವರು ತಮ್ಮ ಯಜಮಾನನನ್ನು ಕೊಂದು ಬೆಲೆ ಬಾಳುವ ಪದಾರ್ಥಗಳನ್ನೆಲ್ಲ ಹೊತ್ತುಕೊಂಡು ಪರಾರಿಯಾದರು.

**ಕಾಮ, ಕ್ರೋಧ, ಮತ್ತು ಲೋಭ** ಇವುಗಳೇ ನಮ್ಮಲ್ಲಿರುವ ಮೂವರು ಗೂಂಡಾಗಳು. ಅವು ನಮ್ಮಲ್ಲಿರುವ ಸದ್ಗುಣ ಸಂಪತ್ತನ್ನೆಲ್ಲ ದೋಚಿಕೊಂಡು ಹೋಗುತ್ತವೆ. ಅಷ್ಟೇ ಅಲ್ಲದೆ ನಮ್ಮನ್ನೂ ನಾಶಮಾಡುತ್ತವೆ. ಆಸೆಗಳು (ಕಾಮ) ನಮ್ಮ ಮಾನಸಿಕ ಶಕ್ತಿಯನ್ನೆಲ್ಲ ಕುಂದಿಸುತ್ತವೆ. ಕ್ರೋಧ ಅಗ್ನಿಯಂತೆ ನಮ್ಮನ್ನು ದಹಿಸುತ್ತದೆ. ಲೋಭವು ನಮ್ಮ ಸುಖ ಶಾಂತಿಯನ್ನೆಲ್ಲ ನಿರ್ಮೂಲ ಮಾಡುತ್ತದೆ. ಆದರಿಂದಲೇ ಶ್ರೀಕೃಷ್ಣ ಹೇಳುತ್ತಾನೆ:

ತ್ರಿವಿಧಂ ನರಕಸ್ಯೇದಂ ದ್ವಾರಂ
ನಾಶನಮಾತ್ಮನಃ ।
**ಕಾಮಃಕ್ರೋಧಸ್ತಥಾ ಲೋಭ**
**–ಸ್ತಸ್ಮಾದೇತತ್ತ್ರಯಂ ತ್ಯಜೇತ್ ॥**

'ಕಾಮ ಕ್ರೋಧ ಲೋಭಗಳು ನರಕದ ಮೂರು ಬಾಗಿಲುಗಳು. ಇವು ನಮ್ಮನ್ನು ನಾಶಮಾಡುತ್ತವೆ. ಆದ್ದರಿಂದ ಇವುಗಳನ್ನು ತ್ಯಜಿಸು.' ❑